ಈ ಮಹಾಗೋಡೆಯನ್ನು ಉತ್ತರ ಚೀನಾದ ನೆರೆರಾಷ್ಟ್ರ ಮಂಗೋಲಿಯದ ಗಡಿ ಪ್ರದೇಶದಲ್ಲಿ ಪಶ್ಚಿಮದಿಂದ ಪೂರ್ವಕ್ಕೆ ಕಟ್ಟಲಾಗಿದ್ದು, 8850 ಕಿ.ಮೀ. ಉದ್ದವಿದೆ ಎನ್ನಲಾಗುತ್ತಿದೆ. ಇನ್ನೊಂದು ಸಮೀಕ್ಷೆಯ ಪ್ರಕಾರ ಇದು 21,196 ಕಿ.ಮೀ. ಉದ್ದವಿದೆ. ಆದರೆ ಸುಭದ್ರವಾಗಿ ಸುಸ್ಥಿತಿಯಲ್ಲಿ ಇಟ್ಟುಕೊಂಡಿರುವ ಗೋಡೆಯ ಉದ್ದ ಸುಮಾರು 5000 ಕಿ.ಮೀ. ಮಾತ್ರ ಎನ್ನುತ್ತಾರೆ. ಈ ಬಗ್ಗೆ ನಿಖರವಾದ ಮಾಹಿತಿಯೂ ಇಲ್ಲ.

ಉತ್ತರದ ನೆರೆ ರಾಷ್ಟ್ರಗಳೊಡನೆ ನೈಸರ್ಗಿಕ ಗಡಿ ಇಲ್ಲದಿರುವುದರಿಂದ, ಆಕ್ರಮಣಗಳಿಂದ ರಕ್ಷಿಸಿಕೊಳ್ಳಲು ಮತ್ತು ತೆರಿಗೆ ವಸೂಲಿ ಮಾಡಲು ಈ ಮಹಾ ಗೋಡೆಯನ್ನು ಕಟ್ಟುವ ಯೋಜನೆ ಕ್ರಿ.ಪೂ. 7ನೇ ಶತಮಾನದಲ್ಲಿ ಶುರುವಾಗಿ ಸುಮಾರು ಕ್ರಿ.ಶ. 16ನೇ ಶತಮಾನದವರೆಗೆ ನಡೆಯಿತು. ಅನೇಕ ರಾಜವಂಶಗಳ ಆಡಳಿತದ ಅವಧಿಯಲ್ಲಿ ಈ ನಿರ್ಮಾಣ ಕಾಮಗಾರಿ ನಡೆದು ಪೂರ್ಣಗೊಂಡಿತು. ಸೂಕ್ಷ್ಮವಾಗಿ ಗಮನಿಸಿದರೆ ಈ ಗೋಡೆ ಪ್ರಾಚೀನ ರೇಷ್ಮೆ ಮಾರ್ಗವನ್ನು ಪ್ರತಿಬಿಂಬಿಸುವಂತಿದೆ.

ಹಾಂ! ರೇಷ್ಮೆ ಮಾರ್ಗ ಎಂದ ಕೂಡಲೇ ನೆನಪಿಗೆ ಬಂತು. ಈ ಪ್ರಾಚೀನ ರೇಷ್ಮೆ ಮಾರ್ಗವನ್ನು ಪುನರುತ್ಥಾನಗೊಳಿಸುವ ಪ್ರಯತ್ನದ ಭಾಗವಾಗಿ ಕೋಲ್ಕತ್ತ ಮತ್ತು ಚೀನಾದ ಪೂರ್ವದ ಗಡಿಯಲ್ಲಿರುವ ಕುನ್‌ಮಿಂಗ್ ನಡುವೆ, ಬಾಂಗ್ಲಾದೇಶ ಮತ್ತು ಬರ್ಮ ಮೂಲಕ ಹೈ ಸ್ಪೀಡ್ ರೈಲು ಸಂಪರ್ಕದ ಯೋಜನೆಯ ಪ್ರಸ್ತಾಪವಿದೆ. ಇದು ಸಾಕಾರಗೊಂಡರೆ ಈ ನಾಲ್ಕೂ ದೇಶಗಳ ಅಂದರೆ ಭಾರತ, ಚೀನಾ, ಬರ್ಮ ಮತ್ತು ಬಾಂಗ್ಲಾದೇಶದ ಪ್ರವಾಸೋದ್ಯಮದ ಅಭಿವೃದ್ಧಿಗೊಂದು ಮುನ್ನುಡಿಯಾಗಬಲ್ಲದು.

ಈ ಮಹಾ ಗೋಡೆಯ ಎದುರು ನಿಂತಾಗ ಎನಿಸಿದ್ದು, ಮಾನವನ ಅಸಾಧಾರಣ ಕಲ್ಪನೆಯನ್ನು ಸಾಕಾರಗೊಳಿಸಲು ಬೇಕಿರುವ ದೃಢಸಂಕಲ್ಪ ಮತ್ತು ವಾಸ್ತುಶಿಲ್ಪದ ಚಾತುರ್ಯದ ಅದ್ಭುತ ದೃಷ್ಟಾಂತವಿದು ಎಂದು.

## ಟಿಯನನ್ಮೆನ್ ಚೌಕ

ಜಗತ್ತಿನ ಬೃಹತ್ ಚೌಕಗಳಲ್ಲಿ ಮೂರನೇ ಸ್ಥಾನವೆಂಬ ಖ್ಯಾತಿ ಪಡೆದಿದೆ ಈ ಚೌಕ. ಆದರೆ, ಜೂನ್ 4, 1989ರಂದು ಪ್ರಜಾಪ್ರಭುತ್ವದ ಪರವಾಗಿ ನಡೆಯುತ್ತಿದ್ದ ಕ್ರಾಂತಿಯನ್ನು, ಸುಮಾರು 30,000 ಸೇನೆಯ ಬಲದೊಂದಿಗೆ ಹತ್ತಿಕ್ಕಿದ ಕರಾಳ ನೆನಪುಗಳನ್ನು ಮರುಕಳಿಸುವ ಸ್ಮಾರಕ ಸ್ಥಳವೆಂದರೆ ತಪ್ಪಾಗಲಾರದು. ಅಂದು ಶಾಂತಿಯಿಂದ ಸರ್ಕಾರದ ವಿರುದ್ಧ ಪ್ರತಿಭಟಿಸುತ್ತಿದ್ದ ಸಾವಿರಾರು ಜನರನ್ನು ಸೇನೆಯ ಗುಂಡೇಟಿನಿಂದ ಕಗ್ಗೊಲೆ ಮಾಡಲಾಯಿತು. ಅಭಿವ್ಯಕ್ತಿ ಸ್ವಾತಂತ್ರವಿಲ್ಲದ ಚೀನಾದಲ್ಲಿ ಇಂದಿಗೂ ಈ ವಿಷಯದ ಬಗ್ಗೆ ಮಾತನಾಡುವ ಹಾಗಿಲ್ಲ; ಹಾಗಾಗಿ, ಚೆಂಗ್ ಈ ವಿಷಯವನ್ನೇ ಪ್ರಸ್ತಾಪಿಸಲಿಲ್ಲ!

ನನಗಂತೂ, ಭಾರತದಲ್ಲಿ 1975ರಲ್ಲಿ ದಿ. ಜಯಪ್ರಕಾಶ್ ನಾರಾಯಣ್ ನೇತೃತ್ವದಲ್ಲಿ ನಡೆದ ಕ್ರಾಂತಿ, ನಂತರದ ತುರ್ತುಪರಿಸ್ಥಿತಿಯ ದಿನಗಳು ಮತ್ತು ಎರಡೂ ಕ್ರಾಂತಿಗಳಲ್ಲಿನ ಒಂದಷ್ಟು ಸಾಮ್ಯತೆಗಳನ್ನು ನೆನಪಿಸಿದ ಸ್ಥಳವಿದು.

## ಸಮ್ಮರ್ ಪ್ಯಾಲೇಸ್

ಸುಮಾರು ಒಂಬತ್ತು ಶತಮಾನಗಳ ಹಿಂದಿನ ಸಮ್ಮರ್ ಪ್ಯಾಲೇಸ್ ಆವರಣದಲ್ಲಿರುವ ಬೃಹತ್ ಸರೋವರ, ಉದ್ಯಾನವನಗಳು ಪ್ರವಾಸಿಗರನ್ನು ಆಶ್ಚರ್ಯಚಕಿತರನ್ನಾಗಿ ಮಾಡುತ್ತವೆ. ಏಕೆಂದರೆ 700 ಎಕರೆಯಷ್ಟು ವಿಸ್ತೀರ್ಣದ ಪ್ಯಾಲೇಸ್ ನಗರದ ಕೇಂದ್ರಭಾಗದಲ್ಲಿದೆ. ಜಗತ್ತಿನ ಅತಿ ಹೆಚ್ಚು ವಾಯುಮಾಲಿನ್ಯದ ನಗರವೆಂಬ ಕುಖ್ಯಾತಿಯಿರುವ ಬೀಜಿಂಗ್‌ಗೆ ಇದೊಂದು ಚೇತೋಹಾರಿ ವಾತಾವರಣದ ವರದಾನ; ಬೆಂಗಳೂರಿನ 450 ಎಕರೆಯ ಪ್ಯಾಲೇಸ್ ಪ್ರದೇಶದಂತೆ. ಹಾಗಾಗಿ, ಸಮ್ಮರ್ ಪ್ಯಾಲೇಸ್ ಬೀಜಿಂಗ್‌ನ ಪ್ರಮುಖ ಆಕರ್ಷಣೆ.

ಗೋಲ್ಡನ್ ಮಾಸ್ಕ್ ಶೋ. ದೇಶದ ಇತಿಹಾಸವನ್ನು ವೈಭವೀಕರಿಸಿ ಸಂಗೀತ,



ಸಮ್ಮರ್ ಪ್ಯಾಲೇಸ್

